ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂ:ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017-18

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಅರಮನೆ ರಸ್ತೆ,
ಬೆಂಗಳೂರು
ದಿನಾಂಕ:7.6.2017

## ಸುತ್ತೋಲೆ

ವಿಷಯ: **Life skills and counseling services ತರಬೇತಿಗೆ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ ಬೋಧಕ/ಬೋಧಕೇತರ ಸಿಬ್ಬಂದಿಯವರು ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿ/ಸಿಬ್ಬಂದಿಯವರನ್ನು ನಿಯೋಜಿಸುವ ಬಗ್ಗೆ.**

ಉಲ್ಲೇಖ: **ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ನಿಮ್ಹಾನ್ಸ್/2016-17/95 ದಿ: 7.6.2017**

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಈಗಾಗಲೇ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳು ಮಾನ್ಯತಾ ಮೌಲ್ಯಮಾಪನಕ್ಕೆ ತಯಾರಿ ನಡೆಸುತ್ತಿದ್ದು, ಸದರಿ ವಿಷಯಕ್ಕೆ ಅನುಕೂಲವಾಗುವಂತೆ ಪ್ರತಿ ಕಾಲೇಜಿನಿಂದ ಇಚ್ಚೆಯುಳ್ಳ ಬೋಧಕ/ಬೋಧಕೇತರ ಸಿಬ್ಬಂದಿಯವರು ಹಾಗೂ ಎನ್.ಎಸ್.ಎಸ್ ಅಧಿಕಾರಿಯವರನ್ನು ಮತ್ತು ಇಚ್ಚೆಯುಳ್ಳ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (NIMHANS), ಬೆಂಗಳೂರು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ **ದಿ: 12.6.2017 ರಿಂದ 17.6.2017 (6 ದಿನಗಳು)** ರವರೆಗೆ ನಡೆಸಲಾಗುತ್ತಿರುವ ***"ಜೀವನ ಕೌಶಲ್ಯ ಮತ್ತು ಸಮಾಲೋಚನಾ ಸೇವೆಗಳ"*** ಕುರಿತು ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ. ಈ ಮೂಲಕ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮೌಲ್ಯಮಾಪನಕ್ಕೆ ಒಳಪಡುವ ಸಂಸ್ಥೆಗಳಿಗೆ ಈ ತರಬೇತಿಯು ಉಪಯುಕ್ತವಾಗಿರುತ್ತದೆ ಎಂದು ಆಶಿಸಲಾಗಿದೆ. ಪ್ರಾಚಾರ್ಯರು ತಮ್ಮ ಸಂಸ್ಥೆಗಳ ಸಿಬ್ಬಂದಿಯವರ ವಿವರಗಳನ್ನು https://goo.gl/forms/ip2yfUyno1IQKunZ2 (Google form) ಮೂಲಕ **ದಿನಾಂಕ:9.6.2017ರ** ಒಳಗಾಗಿ ತಪ್ಪದೇ ಭರ್ತಿಮಾಡಿಸಿ ತರಬೇತಿಗೆ ಹಾಜರಾಗಲು ಸೂಚಿಸಲಾಗಿದೆ.

ಸದರಿ ತರಬೇತಿಯು ಬೆಂಗಳೂರಿನಲ್ಲಿರುವ NIMHANS, ಸಂಸ್ಥೆಯಲ್ಲಿಯೇ ಪ್ರಯಾಣ ಭತ್ಯೆ, ದಿನಭತ್ಯೆ, ವಸತಿ ಮತ್ತು ಊಟದ ವ್ಯವಸ್ಥೆಯೊಂದಿಗೆ ನಡೆಸಲಾಗುತ್ತಿರುವುದರಿಂದ ಭಾಗವಹಿಸುವವರು ಕಡ್ಡಾಯವಾಗಿ 6 ದಿನಗಳ ಕಾಲ ಅಲ್ಲಿಯೇ ಉಳಿದುಕೊಂಡು ತರಬೇತಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿ:-

1) ಎಲ್ಲಾ ಜಂಟಿ ನಿರ್ದೇಶಕರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಪ್ರಾಚಾರ್ಯರುಗಳು, ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಡಾ. ಪ್ರದೀಪ್ ಬಿ.ಎಸ್, ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್, ಲಕ್ಕಸಂದ್ರ, ಬೆಂಗಳೂರು-560029 ಇವರ ಸೂಕ್ತ ಕ್ರಮಕ್ಕಾಗಿ
4) ರಾಜ್ಯ ಸಂಪರ್ಕಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರ ಮಾಹಿತಿಗಾಗಿ
5) ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು-560004 ಇವರ ಮಾಹಿತಿಗಾಗಿ
6) ಇ-ಆಡಳಿತ, ಸಂಯೋಜಕರು, ಸೂಕ್ತ ಕ್ರಮಕ್ಕಾಗಿ
7) ಕಛೇರಿ ಕಡತಕ್ಕೆ